# ಪುಕ್ಕಟೆ ಪ್ರಚಾರ

'ನಾನು ಎಲ್ಲಿಗೆ ಬೇಕಾದರೂ ಹೋಗುತ್ತೇನೆ, ಅದು ನನ್ನ ವೈಯಕ್ತಿಕ ಬದುಕು. ಯಾರಿಗೂ ನನ್ನನ್ನು ಬಂದು ನೋಡಿ, ನನ್ನ ಫೋಟೊ ತೆಗೆಯಿರಿ ಎಂದು ಹೇಳಿಲ್ಲ. ಯಾರಾದರೂ ನನ್ನ ಫೋಟೊ ಕ್ಲಿಕ್ಕಿಸಿದರೂ, ಕ್ಲಿಕ್ಕಿಸದಿದ್ದರೂ ನನಗೇನೂ ವ್ಯತ್ಯಾಸವಿಲ್ಲ. ಈ ಪ್ರಶ್ನೆಗಳಿಗೆ ಸಂಬಂಧಿಸಿ ಯಾರಿಗೂ ಉತ್ತರಿಸಲು ನಾನು ಹೊಣೆಗಾರಳಲ್ಲ. ಅದು ನನ್ನ ಕೆಲಸಕ್ಕೆ ಸಂಬಂಧಿಸಿದ್ದೂ ಅಲ್ಲ. ನನ್ನ ವೈಯಕ್ತಿಕ ಬದುಕಿನ ಬಗ್ಗೆ ನಾನು ಹಿಂದೆಯೂ ಮಾತನಾಡಿಲ್ಲ; ಮುಂದೆಯೂ ಮಾತನಾಡುವುದಿಲ್ಲ. ಏಕೆಂದರೆ ಅದು ಸಂಪೂರ್ಣವಾಗಿ ನನ್ನ ಹಕ್ಕು. ಮುಂದೆಯೂ ಹೀಗೆಯೇ ಇರುತ್ತೇನೆ.'

–ವಿರಾಟ್ ಕೊಹ್ಲಿ ಬಗ್ಗೆ ಇತ್ತೀಚೆಗೆ ಪತ್ರಕರ್ತರು ಕೇಳಿದ ಪ್ರಶ್ನೆಗೆ ಬಾಲಿವುಡ್ ನಟಿ ಅನೂಷ್ಕಾ ಶರ್ಮಾ ನೀಡಿದ ಖಚಿತ ಉತ್ತರವಿದು. ಅವತ್ತು ಯಾವ ಪತ್ರಕರ್ತರೂ ಇನ್ನೊಂದು ಪ್ರಶ್ನೆ ಕೇಳಲಿಲ್ಲ. ಆದರೆ ಸಾಮಾಜಿಕ ಜಾಲತಾಣಗಳಲ್ಲಿ ಅನೂಷ್ಕಾ ಬಗ್ಗೆ ಬಂದ ಟೀಕೆಗಳನ್ನು ಗಮನಿಸಿದರೆ, ಜನರಿಗೆ ಸೆಲೆಬ್ರಿಟಿಗಳ ವೈಯಕ್ತಿಕ ಬದುಕಿನ ಬಗ್ಗೆಯಾಗಲೀ, ಖಾಸಗೀತನದ ಬಗ್ಗೆಯಾಗಲೀ ಅಷ್ಟೊಂದು ಗೌರವವಿದ್ದಂತೆ ಕಾಣುತ್ತಿಲ್ಲ. ಅಲ್ಲಿನ ಟೀಕೆಗಳು ಎಷ್ಟೊಂದು ಕೆಳಮಟ್ಟದಲ್ಲಿವೆ! ಆಸ್ಟ್ರೇಲಿಯಾ ವಿರುದ್ಧ ವಿಶ್ವಕಪ್ ಸೆಮಿಫೈನಲ್‌ನಲ್ಲಿ ಕೊಹ್ಲಿ ಒಂದೇ ಒಂದು ರನ್ ಗಳಿಸಿ ಔಟಾದದ್ದಕ್ಕೂ, ಅನೂಷ್ಕಾ ಸ್ಟೇಡಿಯಂನಲ್ಲಿ ಬಂದು ಕುಳಿತದ್ದಕ್ಕೂ ಸಂಬಂಧ ಕಲ್ಪಿಸುವುದು ಮೂರ್ಖತನವೇ ಸರಿ. ವಿಶ್ವಕಪ್‌ನ ಹಿಂದಿನ ಪಂದ್ಯದಲ್ಲಿ ಕೊಹ್ಲಿ ಭರ್ಜರಿ ಆಟವಾಡಿದಾಗಲೂ ಅನೂಷ್ಕಾ ಸ್ಟೇಡಿಯಂನಲ್ಲಿ ಹಾಜರಿದ್ದಳು. ಆಗ ಅದಕ್ಕಾಗಿ ಯಾರೂ ಹೊಗಳಿರಲಿಲ್ಲ. ಹಾಗಿರುವಾಗ ಒಂದೇ ರನ್‌ಗೆ ಕೊಹ್ಲಿ ಔಟಾದರೆ ಅದಕ್ಕಾಗಿ ಅನೂಷ್ಕಾಳನ್ನು ತೆಗಳುವುದು ಎಷ್ಟು ಸರಿ? ಅಥವಾ ಬಾಲಿವುಡ್‌ನಲ್ಲಿ ಅನೂಷ್ಕಾಳ ಸಿನಿಮಾವೊಂದು ತೋಪಾದರೆ ಅದಕ್ಕೆ ಕೊಹ್ಲಿಯ ಗೆಳೆತನವೇ ಕಾರಣ ಎಂದು ತೆಗಳಲಾದೀತೆ? ಅನೂಷ್ಕಾ ಗಟ್ಟಿಗಿತ್ತಿ. ಆಸ್ಟ್ರೇಲಿಯಾದಿಂದ ವಿಶ್ವಕಪ್ ಮುಗಿಸಿ ವಾಪಸ್ ಭಾರತಕ್ಕೆ ಬಂದಾಗ ಕೊಹ್ಲಿಯ ಕೈ ಹಿಡಿದುಕೊಂಡೇ ವಿಮಾನ ನಿಲ್ದಾಣದಿಂದ ಹೊರಬಂದಳು. ದೆಹಲಿಯಲ್ಲಿ ಕಳೆದ ವಾರ ಇಬ್ಬರೂ ಊಟ ಮಾಡಲು ರೆಸ್ಟೋರೆಂಟಿಗೆ ಹೋದಾಗ, ಛಾಯಾಗ್ರಾಹಕನೊಬ್ಬ ಫೋಟೋ ತೆಗೆಯಲು ಬಂದರೆ ಮುಗುಳ್ನಕ್ಕು ಸುಮ್ಮನಾದಳು. ಕೊಹ್ಲಿಯೂ ಅಷ್ಟೆ–ಏಪ್ರಿಲ್ 7ರಂದು ಕೋಲ್ಕತ್ತಾದ ಸಾಲ್ಟ್‌ಲೇಕ್ ಸ್ಟೇಡಿಯಂನಲ್ಲಿ ಐಪಿಎಲ್ ಉದ್ಘಾಟನಾ ಸಮಾರಂಭದಲ್ಲಿ ಕುಣಿಯುತ್ತಿದ್ದ ಅನೂಷ್ಕಾಳನ್ನು ನೋಡುತ್ತಾ ಹೊಗಳುತ್ತಿದ್ದ. ಟೀವಿ ಕ್ಯಾಮೆರಾಗಳು ಅದನ್ನು ಸೆರೆಹಿಡಿಯಲು ಫೋಕಸ್ ಮಾಡಿದರೆ ಮೊದಲು ಮಿಸುಕಾಡಿದರೂ ಬಳಿಕ ನಸುನಕ್ಕ. ವಿರಾಟ್ ಉಳಿದುಕೊಂಡಿದ್ದ ಐಟಿಸಿ ಸೋನಾರ್ ಹೋಟೆಲ್ಲಿಗೆ ತೆರಳಿದ ಅನೂಷ್ಕಾ ಅಲ್ಲಿ ಕಾಫಿ ಶಾಪ್‌ನಲ್ಲಿ ಎಲ್ಲರಿಗೂ ಕಾಣಿಸುವಂತೆ ಕುಳಿತು ಗೆಳೆಯನ ಜತೆಗೆ ಕಾಫಿ ಕುಡಿದು ಹರಟಿದಳು. ಇದುವರೆಗೆ ಕದ್ದುಮುಚ್ಚಿ ಓಡಾಡುತ್ತಿದ್ದವರು ಬಹಿರಂಗವಾಗಿ ವಿಷಯ ಒಪ್ಪಿಕೊಂಡ ಮೇಲೆ ಜನರಿಗೂ ಕುತೂಹಲ ಕಡಿಮೆಯಾಗುತ್ತದೆ ಬಿಡಿ.

ಅಯೋಧ್ಯೆಯಲ್ಲಿ ಕಾರ್ಮಿಕ ದಿನಾಚರಣೆಯಂದು (1988) ಹುಟ್ಟಿದ ಅನೂಷ್ಕಾ, ಬೆಂಗಳೂರಿನ ಮೌಂಟ್ ಕಾರ್ಮೆಲ್‌ನ ಓಲ್ಡ್ ಸ್ಟೂಡೆಂಟ್. ಬಾಲಿವುಡ್‌ನಲ್ಲಿ ಈಗಿನ ಎತ್ತರಕ್ಕೆ ಏರುವಲ್ಲಿ ಸಾಕಷ್ಟು ಬೆವರು ಸುರಿಸಿದ್ದಾಳೆ. ಮುಂಬೈಗೆ ಮಾಡೆಲಿಂಗ್ ನಡೆಸಲು ಬಂದು ಬಾಲಿವುಡ್ ಪ್ರವೇಶಿಸಿದ ಆಕೆಯ ವೃತ್ತಿಜೀವನ ಈಗ ಸ್ಥಿರತೆಯ ಹಂತಕ್ಕೆ ಬಂದು ಮುಟ್ಟಿದೆ. ಇತ್ತೀಚೆಗೆ ಈಕೆಯ ಸ್ವಂತ ನಿರ್ಮಾಣದ 'ಎನ್‌ಎಚ್10' ಚಿತ್ರ ಅಪಾರ ಹಣ ಮಾಡದಿದ್ದರೂ ವಿಮರ್ಶಕರಿಂದ ಮೆಚ್ಚಿಗೆ ಪಡೆಯಿತು. 'ಲೈಫ್‌ಸ್ಟೈಲ್' ನ ಪ್ರಚಾರ ರಾಯಭಾರಿ ಆಗಿರುವ ಈಕೆ ಮುಂಬೈಯಲ್ಲಿ ಈಗಲೂ ಬಹುಬೇಡಿಕೆಯ ಮಾಡೆಲ್.

ವಿವಾದಗಳು ಸೆಲೆಬ್ರಿಟಿಗಳಿಗೆ ನೆರವಾಗುವುದೂ ನಿಜವೇ. ದೇಶಾದ್ಯಂತ ಕಲೆಕ್ಷನ್‌ನಲ್ಲಿ ದಾಖಲೆ ನಿರ್ಮಿಸಿದ ಅಮೀರ್ ಖಾನ್ ಅಭಿನಯದ 'ಪೀಕೆ' ಚಿತ್ರದಲ್ಲಿ ನಾಯಕಿಯಾಗಿ ಅಪಾರ ಪ್ರಚಾರ ಗಿಟ್ಟಿಸಿಕೊಂಡ ಅನೂಷ್ಕಾ, ಈಗ ಕೊಹ್ಲಿ ಜತೆಗಿನ ನಂಟಿನಿಂದಾಗಿ ಪಡೆಯುತ್ತಿರುವ ಪ್ರಚಾರ ಆಕೆಯ ಹೊಸ ಚಿತ್ರಗಳಿಗೆ ನೆರವಾಗುವುದು ಖಂಡಿತ. ಈ ವಾರ ಬಿಡುಗಡೆಯಾಗಲಿರುವ ಅನುರಾಗ್ ಕಶ್ಯಪ್ ನಿರ್ದೇಶನದ 'ಬಾಂಬೆ ವೆಲ್ವೆಟ್'ನಲ್ಲಿ ಈಕೆಯ ಕ್ಲಬ್ ಸಿಂಗರ್ ಪಾತ್ರ ಕುತೂಹಲ ಕೆರಳಿಸಿದೆ. ರಣಬೀರ್ ಕಪೂರ್ ಅದರಲ್ಲಿ ಹೀರೊ. ಅದರಲ್ಲೂ 1956ರ ಗುರುದತ್ ನಿರ್ದೇಶನದ ಸಿಐಡಿ ಚಿತ್ರದ 'ಜಾಥಾ ಕಹಾ ಹೈ ದೀವಾನೆ' ಹಾಡು ಜಾಲತಾಣಗಳಲ್ಲಿ ಜನಪ್ರಿಯತೆ ಗಳಿಸಿದೆ. ಜೂನ್ 5ಕ್ಕೆ ಬಿಡುಗಡೆಯಾಗಲಿರುವ 'ದಿಲ್ ದಢಕ್‌ನೇ ದೋ' ಚಿತ್ರದಲ್ಲಿ ಫರ್ಹಾನ್ ಅಖ್ತರ್, ರಣವೀರ್ ಸಿಂಗ್ ಮತ್ತು ಪ್ರಿಯಾಂಕಾ ಚೋಪ್ರಾ ಜತೆ ಸವಾಲಿನ ಪಾತ್ರವಿದೆ. ಸದ್ಯಕ್ಕಂತೂ ಪ್ರಚಾರದ ಹಿನ್ನೆಲೆಯಲ್ಲಿ ಈಕೆಯೇ ಬಾಲಿವುಡ್‌ನ 'ನಂಬರ್ ಒನ್' ಹೀರೋಯಿನ್. ■



Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65